## ಒದೆಯುವುದು ಹಾಸ್ಯವೇ?

ಝೀ ಕನ್ನಡದ ‘ಕಾಮಿಡಿ ಕಿಲಾಡಿಗಳು’ ಪ್ರದರ್ಶನದಲ್ಲಿ ಗೋಳು ಹೊಯ್ದುಕೊಳ್ಳುತ್ತಿದ್ದ ಅಥವಾ ಪಂಗನಾಮ ಹಚ್ಚುವ ಕೆಲಸ ಮಾಡುತ್ತಿದ್ದ ಕಲಾವಿದನಿಗೆ ಇನ್ನೊಬ್ಬ ಕಲಾವಿದ ಬಡಿಗೆಯಿಂದ ಬಾರಿಸುವುದು ಇಷ್ಟು ದಿನದ ಕೆಲಸವಾಗಿತ್ತು. ಈಗ ಅದು ಇನ್ನೊಂದು ಆಯಾಮಕ್ಕೆ ತಿರುಗಿದೆ. ಕಿರಿಕ್ಕು ಮಾಡಿದವನ ಮೇಲೆ ಸೇಡು ತೀರಿಸಿಕೊಳ್ಳಲು ಬೇರೆ ಕಲಾವಿದರು ಹಾರಿ ಹಾರಿ ಒದೆಯುವ ಸನ್ನಿವೇಶಗಳನ್ನು ಹೆಣೆಯಲಾಗಿದೆ. ಇದಕ್ಕೆ ಪ್ರೇಕ್ಷಕರು ಸೇರಿದಂತೆ ತೀರ್ಪುಗಾರರು ಹುಚ್ಚೆದ್ದು ನಗುತ್ತಾರೆ. ಒದೆಯುವುದು ಕಾಮಿಡಿಯೇ?.

—ಡಿ. ಅಮಿನಾಬಿ, ಹರಪನಹಳ್ಳಿ

## ಬೆತ್ತ ಕಿತ್ತುಕೊಳ್ಳಿ, ಪ್ಲೀಸ್..

ಝೀ ಕನ್ನಡದ ‘ಕಾಮಿಡಿ ಕಿಲಾಡಿಗಳು’ ವೇದಿಕೆಯಲ್ಲಿ ಈ ಬಾರಿ ಉತ್ತರ ಕರ್ನಾಟಕದ ಹಲವು ಪ್ರತಿಭೆಗಳಿಗೆ ಹೆಚ್ಚು ಅವಕಾಶ ಸಿಕ್ಕಿದೆ. ಅವರಲ್ಲಿ ವೃತ್ತಿ ರಂಗಭೂಮಿಯ ಹರೀಶ್ ಗದಗ, ಗಿಲ್ಲಿ ನಟರಾಜ್, ಸ್ಟ್ಯಾಂಡ್ ಅಪ್ ಕಾಮಿಡಿ ರಾಘವೇಂದ್ರ ಆಚಾರ್ಯ ಗಮನ ಸೆಳೆದಿದ್ದಾರೆ. ಆದರೆ, ಅದೇ ಅರಚಾಟ, ಡಬ್ಬಲ್ ಮೀನಿಂಗ್ ಸಂಭಾಷಣೆ, ಬಲವಂತ ನಗುವಿಕೆ ಬೇಸರ ತರಿಸುತ್ತದೆ. ಕೊಂಕಣ ಸುತ್ತಿ ಮೈಲಾರಕ್ಕೆ ಹೋದಂತೆ ಪ್ರಸಂಗಗಳು ಕಾಣಿಸುತ್ತವೆ. ಅಂತ್ಯದಲ್ಲಿ ಸ್ತ್ರೀ ಪಾತ್ರಧಾರಿಗಳು ಬೆತ್ತ ಹಿಡಿದು ಪುರುಷರಿಗೆ ಸಖತ್ತಾಗಿ ಲತ್ತೆ ಕೊಡುವ ದೃಶ್ಯ ಮುಂದುವರೆದಿದೆ. ದಯವಿಟ್ಟು ಯಾರಾದರೂ ಈ ಬೆತ್ತವನ್ನು ಕಿತ್ತುಕೊಂಡು ಎಸೆಯಬಾರದೆ?

—ಕೆ. ಲೀಲಾ ಶ್ರೀನಿವಾಸ್. ಹರಪನಹಳ್ಳಿ

## ದಸರೆಗೆ ಬೇಡವೆ ಬಿಡುವು?

ಚಂದನದ ಮುಖ್ಯ ಆಕರ್ಷಣೆ ಎಂದರೆ ‘ಥಟ್ ಅಂತ ಹೇಳಿ’. ಇತ್ತೀಚೆಗೆ ಬಿತ್ತರಿಸಿದ್ದ ಕಂತುಗಳನ್ನೇ ಪುನಃ ಪ್ರಸಾರ ಮಾಡುತ್ತಿದ್ದಾರೆ. ನೋಡುವುದಕ್ಕೆ ಬೇಸರ ಎಂದೆನಿಸುತ್ತದೆ. ಅಡಿ ಬರಹದಲ್ಲಿ ‘ಥಟ್ ಅಂತ ಹೇಳಿ’ ಬದಲು ‘ದಸರಾ 2022’ ಅನ್ನೋ ವಾಕ್ಯವೇ ಇನ್ನೂ ಪ್ರಸಾರ ಆಗ್ತಾ ಇದೆ. ಚಂದನ ವಾಹಿನಿಯೇ, ಇದು ಸರಿಯೇ?

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಬಣ್ಣ ತಿಳಿಯಾದುದು ಲಕ್ಷಣವೋ ಅವಲಕ್ಷಣವೋ...



ಕಲರ್ಸ್ ಕನ್ನಡದ ‘ಲಕ್ಷಣ’ ನಾವು ಬಹಳ ಆಸಕ್ತಿಯಿಂದ ನೋಡುತ್ತಿದ್ದ ಧಾರಾವಾಹಿ. ಅದರ ಮೂಲಕಥೆ ವರ್ಣನೀತಿಯ ಆಧಾರದ ಮೇಲೇ ಇತ್ತು. ಕಪ್ಪು ಬಣ್ಣದ ಪೋಷಕರ ಮಗಳು, ಬಿಳಿಬಣ್ಣದ ಪೋಷಕರ ಮಗು ಅದಲು ಬದಲಾಗುವುದೇ ಈ ಕಥೆಯ ಜೀವಾಳವಾಗಿತ್ತು. ಪರದೆಯ ಮೇಲೆ ಬರುತ್ತಿದ್ದ ಪಾತ್ರಗಳ ಮೇಕಪ್ ನೋಡಿ ನೋಡಿ ಅಭ್ಯಾಸವಾಗಿದ್ದ ನಮಗೆ ಈ ಪಾತ್ರಗಳ ಬಣ್ಣ ಕಿರಿಕಿರಿಯನ್ನೂ ಉಂಟು ಮಾಡಿತ್ತು. ಆದರೆ ಅದೇ ಕಥಾವಸ್ತುವಾಗಿದ್ದರಿಂದ ಮನಸ್ಸೂ ಅದಕ್ಕೆ ಹೊಂದಿಕೊಂಡಿತ್ತು. ಇತ್ತೀಚಿನ ಕಂತುಗಳಲ್ಲಿ ಪ್ರಮುಖ ಪಾತ್ರಗಳಾದ ಚಂದ್ರಶೇಖರ್, ಆರತಿ, ನಕ್ಷತ್ರಳ ಬಣ್ಣ ಸ್ವಲ್ಪ ತಿಳಿಯಾಗಿದೆ. ಏಕೆ ಹೀಗಾಯಿತು? ಕಥೆ ಮುಂದುವರಿದಂತೆ ಕಥಾವಸ್ತುವನ್ನೇ ತಿರುಚಬಹುದೇ?

—ಮನೋಜ್ ಕುಮಾರ್ ಕೆ.

## ಅತಿರೇಕದ ಹಿಂಸೆ

ಕಲರ್ಸ್ ಕನ್ನಡದ ‘ರಾಮಾಚಾರಿ’ಯಲ್ಲಿ ಅವನ ಅತ್ತಿಗೆ ಮತ್ತು ‘ಕನ್ನಡತಿ’ಯಲ್ಲಿ ಅಮ್ಮಮ್ಮ ತೀರಿದ್ದು ವೈದ್ಯರು ಹೇಳಿದ್ದರಿಂದಲೇ ತಿಳಿದುಹೋಗುತ್ತದೆ. ನಂತರ ಮನೆಯಲ್ಲಿ ಗೋಡೆಗೆ ನೇತು ಹಾಕಿದ ಒಂದು ಫೋಟೊ ಅದನ್ನು ಮತ್ತಷ್ಟು ಸ್ಪಷ್ಟಪಡಿಸಿದರೆ ಸಾಕಿತ್ತು. ಅದು ಬಿಟ್ಟು ಶವದ ರೀತಿಯಲ್ಲಿ ಅವರಿಗೆ ಸ್ನಾನ ಮಾಡಿಸಿದ್ದು, ಚಟ್ಟದ ಮೇಲೆ ಮಲಗಿಸಿ ಮೈಮೇಲೆ ಹೂಮಾಲೆಗಳನ್ನು ಹೇರಿದ್ದು, ಬಾಯಲ್ಲಿ ಅಕ್ಕಿ ಹಾಕುವುದು. ಸರದಿಯಂತೆ ಗೋಳಾಡುವುದು. ಈ ದೃಶ್ಯಗಳು ಅತಿರೇಕ ಮತ್ತು ಅನವಶ್ಯಕವೆನಿಸಿದವು. ಈ ದೃಶ್ಯಗಳಿಗೆ ಒಡ್ಡಿಕೊಂಡ ಆ ಪಾತ್ರಧಾರಿಗಳಿಗೆ ಅದೆಷ್ಟು ಹಿಂಸೆಯಾಯಿತೋ ಏನೋ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ‘ಬಿಗ್ ಬಾಸ್’ಗೆ ಕನ್ನಡ ಕಷ್ಟವೆ?

ಕಲರ್ಸ್ ಕನ್ನಡದ ‘ಬಿಗ್ ಬಾಸ್’ನ ಭಾನುವಾರದ ಸಂಚಿಕೆಯಲ್ಲಿ ಸುದೀಪ್ ಸ್ಪರ್ಧಿಗಳಿಗೆ ಹೊಸ ಕೆಲಸವನ್ನು ನಿರ್ದೇಶಿಸಿದರು. ಅದಕ್ಕಾಗಿ ಗುಂಪಿನಲ್ಲಿ ಎರಡು ವಿಭಾಗ ಮಾಡಿದರು. ‘ಕೇರಿಂಗ್’ ಹಾಗೂ ‘ಸೆಲ್ಫ್ ಸೆಂಟರ್ಡ್’ ಎಂದು ಎರಡು ವಿಭಾಗಗಳಲ್ಲಿ, ಸ್ಪರ್ಧಿಗಳ ಭಾವಚಿತ್ರ ಅಂಟಿಸುವ ಮೂಲಕ ತಮ್ಮ ಅಭಿಪ್ರಾಯ ಪ್ರಕಟಿಸಬೇಕೆಂದು ಎಲ್ಲರಿಗೂ ಹೇಳಿದರು. ಈ ಟಾಸ್ಕ್‌ನಲ್ಲಿ, ಇಂಗ್ಲಿಷಿನ ‘ಕೇರಿಂಗ್’ (Caring), ‘ಸೆಲ್ಫ್ ಸೆಂಟರ್ಡ್’ (Self centerde) ಶೀರ್ಷಿಕೆಗಳ ಬದಲು, ‘ಕಾಳಜಿ ತೋರುವ’ ಹಾಗೂ ‘ಸ್ವಾರ್ಥ ಮನೋಭಾವದವರು’ ಎಂದು ಕನ್ನಡ ಪದಗಳನ್ನು ಬಳಸಬಹುದಿತ್ತು. ಆದರೆ ಇಲ್ಲೂ ತಮ್ಮ ಇಂಗ್ಲಿಷ್ ಮೋಹವನ್ನು ತೋರಿಸಿದ್ದಾರೆ. ಸ್ಪರ್ಧಿಗಳು ಕೂಡ ‘ಬಿಗ್ ಬಾಸ್’ನಲ್ಲಿ ಇಂಗ್ಲಿಷ್ ಪದಗಳನ್ನು ಮೇಲಿಂದ ಮೇಲೆ ಬಳಸುತ್ತಾರೆ. ಕೆಲವರಿಗೆ ಕನ್ನಡದ ನಡುವೆ ಇಂಗ್ಲಿಷ್ ಪದಗಳನ್ನು ಸೇರಿಸುವುದೇ ಪ್ರತಿಷ್ಠೆ ಎನ್ನುವಂತೆ ತೋರಿಸಿಕೊಳ್ಳುತ್ತಾರೆ. ಏಕೆ ಸ್ಪರ್ಧಿಗಳಿಗೆ ಮತ್ತು ಬಿಗ್‌ಬಾಸ್‌ಗೆ ಅಚ್ಚಕನ್ನಡ ಎಂದರೆ ತಾತ್ಸಾರ?

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಆದರ್ಶನಾರಿ ಬುದ್ಧಿವಂತೆಯೂ ಆಗಿರಲಿ

ಕಲರ್ಸ್ ಕನ್ನಡದ ‘ಕನ್ನಡತಿ’ಯಲ್ಲಿ ಭುವಿಯ ಅತಿ ಆದರ್ಶ, ಒಳ್ಳೆತನ, ಪೆದ್ದುತನ ವೀಕ್ಷಕರ ಸಹನೆಯನ್ನು ಕೆಣಕುತ್ತಿದೆ. ಈ ಆದರ್ಶನಾರಿಗೆ ಸ್ವಲ್ಪ ಧೈರ್ಯ, ಬುದ್ಧಿವಂತಿಕೆ, ಲವಲವಿಕೆಯನ್ನು ತುಂಬಿದರೆ ಚೆನ್ನಾಗಿರುತ್ತದೆ. ಎಳೆಯುತ್ತಿರುವ ಧಾರಾವಾಹಿ ಇನ್ನೂ ಏಕೆ ಮುಗಿದಿಲ್ಲ ಎಂದು ವೀಕ್ಷಕರು ಕೇಳುವ ಮೊದಲೇ ಅಂತ್ಯ ಮಾಡಬೇಕೆಂದು ವಿನಂತಿ. ಆರಂಭದಿಂದಲೂ ಸೊಗಸಾಗಿತ್ತು. ಅದೇ ಜನಪ್ರಿಯತೆಗೂ ಕಾರಣವಾಗಿತ್ತು. ಸಾನಿಯಾ ಮತ್ತು ವರೂಧಿನಿಯವರ ಚಾಣಾಕ್ಷತೆ ಈ ಪಾತ್ರಕ್ಕೂ ತುಂಬಿದರೆ ಭುವಿಗೆ ಜೀವಕಳೆ ಬಂದೀತು.

—ರಮಾನಂದ ಶರ್ಮಾ, ಬೆಂಗಳೂರು



## ನಗುವ ಭಾಗ್ಯವಿಲ್ಲ, ನಿಂದನೆಯೇ ಎಲ್ಲ!

ಸಿರಿ ಕನ್ನಡದ ‘ಯುಗಾಂತರ’ ಧಾರಾವಾಹಿಯಲ್ಲಿ ಅರುಂಧತಿ ತಂದೆಯನ್ನು ತುಂಬಾ ಹೀನಾಯವಾಗಿ ಬಿಂಬಿಸಿದ್ದಾರೆ. ವಾಸ್ತವವಾಗಿ ಆತ ಜವಾಬ್ದಾರಿ ಇಲ್ಲದ ಮನುಷ್ಯ. ಅವರನ್ನು ಎಲ್ಲರೂ ಕೀಳಾಗಿ ಕಾಣುತ್ತಾರೆ. ಅವರ ಪತ್ನಿ ಕೂಡ ತುಂಬ ನಿಂದಿಸುತ್ತಾರೆ. ಇದು ಅತಿಯಾಯಿತು. ಪಾಪದ ಜೀವಕ್ಕೆ ಒಮ್ಮೆಯಾದರೂ ನಗುವ ಭಾಗ್ಯವಿಲ್ಲ. ಸದಾಶಿವರಾಯರ ಮಗಳು ಮತ್ತು ಮಗ ನಾಪತ್ತೆಯಾಗಿದ್ದಾರೆ. ಈ ಧಾರಾವಾಹಿಯ ಪ್ರಮುಖ ಅಂಶವೆಂದರೆ ಅರ್ಥಗರ್ಭಿತ, ಬಿಗಿಯಾದ ಸಂಭಾಷಣೆ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ